# ಕಾಲು ಕಸೂತಿ





ಬಣ್ಣ ಬಣ್ಣದ ದಾರಗಳನ್ನು ಸೂಜಿಗೆ ಪೋಣಿಸಿ ಬಟ್ಟೆಯ ಮೇಲೆ ಮಾಡುವ ಹೆಣಿಗೆ ಅಲಂಕಾರವೇ ಎಂಬ್ರಾಯಿಡರಿ. ಇದೊಂದು ನಾಜೂಕಾದ ವಿದ್ಯೆ, ಎಲ್ಲರಿಗೂ ಸಿದ್ಧಿಸುವುದಿಲ್ಲ. ಆದರೆ ಚೀನಾದ ಗೊ ಭೋ ಯಿಂಗ್ ಮಾಡಿರುವ ಎಂಬ್ರಾಯಿಡರಿ ಕೆಲಸವನ್ನು ನೋಡಿರುವವರೆಲ್ಲಾ ಈಕೆಗೆ ಚೆನ್ನದ ಕೈಗಳಿವೆಯೇನೋ ಅಂದುಕೊಳ್ಳುತ್ತಾರೆ. ವಾಸ್ತವವಾಗಿ ಈಕೆಗೆ ಎರಡೂ ಕೈಗಳಿಲ್ಲ. ನಾವು ಕೈಗಳಿಂದ ಮಾಡುವ ಕೆಲಸಗಳನ್ನೆಲ್ಲಾ ಈಕೆ ಕಾಲಿನಿಂದಲೇ ಮಾಡುವುದನ್ನು ಕಲಿತಿದ್ದಾಳೆ. ಚೀನಾ ದೇಶದ ಟಿಯಾನ್ಜಿನ್ ನಗರದಲ್ಲಿ ವಾಸವಾಗಿರುವ ಗೊ ಭೋ ಯಿಂಗ್, ಸೂಜಿಗೆ ದಾರವನ್ನು ಪೋಣಿಸಿ ಚಕಚಕನೆ ಹೆಣಿಗೆ ಮಾಡುವುದನ್ನು ನೋಡುತ್ತಿದ್ದರೆ ಎಲ್ಲರೂ ನಿಬ್ಬೆರಗಾಗುವುದು ಖಂಡಿತ. ಕೈಗಳೆರಡೂ ಇರದ ಈಕೆ ತನ್ನ ಹದಿಹರೆಯದಲ್ಲೇ ಹೆಣಿಗೆ ಕಲಿತು ಈಗ ಅದರಲ್ಲಿ ಅಪಾರ ನೈಪುಣ್ಯ ಗಳಿಸಿಕೊಂಡಳು. ಎರಡೂ ಕೈಗಳಿದ್ದವರು ಮಾಡುವಷ್ಟೇ ಸಲೀಸಾಗಿ ಈಕೆ ಕಾಲುಗಳಿಂದ ಎಂಬ್ರಾಯಿಡರಿ ಮಾಡುತ್ತಾಳೆ. ಕಾಲುಗಳಿಂದ ಹೆಣೆದ ಬಲು ಚಂದ ಚಂದದ ಎಂಬ್ರಾಯಿಡರಿಗಳು ಶಾಂಘೈ ಎಕ್ಸ್‌ಪೋದಲ್ಲಿ ಪ್ರದರ್ಶನಗೊಂಡು ಮೆಚ್ಚುಗೆ ಪಡೆದಿವೆ.

■ ವಿದ್ಯಾ ವಿ. ಹಾಲಭಾವಿ

